ಎಂಬಾತ. ಆತನಿಗೆ ಸರಿಸುಮಾರು ನನ್ನದೇ ಪ್ರಾಯ. ನಮ್ಮ ತಂದೆ ಕಾಲದಿಂದ ಇದ್ದವನು."

"ತಿಜೋರಿಯ ಬಗ್ಗೆ ನಿಮ್ಮ ಮಕ್ಕಳಿಗೆ ತಿಳಿದಿಲ್ಲ, ಅಲ್ವೇ?"

"ನಾನು ಹೇಳಿಲ್ಲ. ಇಬ್ಬರೂ ಮಕ್ಕಳೂ ಪ್ರಯೋಜನವಿಲ್ಲದವರು. ಜೊತೆಗೆ ಎಣ್ಣೆ ಹಾಕುವ ದುರಭ್ಯಾಸ. ಹತ್ತನೇ ಕ್ಲಾಸಲ್ಲೇ ಓದಿಗೆ ನಮಸ್ಕಾರ ಹೊಡೆದರು. ಚಿನ್ನಪ್ಪ ಸಣ್ಣ ನೌಕರಿ ಮಾಡಿಕೊಂಡಿದ್ದಾನೆ. ಮಹೇಶ ಸುಮ್ನೆ ಕಾಲ ಕಳೀತಾ ಇದ್ದಾನೆ. ಸ್ವಲ್ಪ ಕಾಫಿ ತೋಟ ಇದೆ. ಹೇಗೋ ಸಂಸಾರ ನಡೆಯುತ್ತೆ. ಹಾಂ... ವಿಷಯಕ್ಕೆ ಬರ್ತೀನಿ. ಆ ತಿಜೋರಿಗೆ ಒಂದು ಕೀಲಿ ಕೈ ಇದೆ. ಹಳೆಯ ಕಾಲದ ದೊಡ್ಡ ಕೀ. ಒಂದೇ ಒಂದು ಇರೋದು. ಅದನ್ನು ಬೆಡ್‌ರೂಮಿನಲ್ಲಿರುವ ಪುಸ್ತಕ ಅಲಮಾರಿನಲ್ಲಿರುವ ಸಣ್ಣ ಅರೆಯಲ್ಲಿ ಇಡುವುದು. ಆ ಅಲಮಾರು ಕೂಡಾ ತಾತನ ಕಾಲದಿಂದ ಬಂದಿದ್ದು. ಬಹಳ ಗಟ್ಟಿಮುಟ್ಟಾಗಿದೆ. ಆ ರಹಸ್ಯ ಅರೆಯಿರುವುದು ಯಾರಿಗೂ ಗೊತ್ತಿಲ್ಲ. ಹಳೆಯ ಹಲವು ಪುಸ್ತಕಗಳು ಆ ಅಲಮಾರಿನಲ್ಲಿವೆ. ಮೂರನೆಯ ಅರೆಯಲ್ಲಿ ಹಿಂಬದಿಯ ಪಟ್ಟಿಯಲ್ಲಿ ಸಣ್ಣ ಪಾಕೆಟ್ ಇದೆ. ಅದರೊಳಗೆ ತಿಜೋರಿಯ ಕೀ ಇಡುವುದು. ಆ ಜಾಗ ನನಗೊಬ್ಬನಿಗೆ ಮಾತ್ರ ತಿಳಿದಿರುವುದು."

"ಅದು ಹೇಗೆ ಅಷ್ಟು ಖಚಿತವಾಗಿ ಹೇಳ್ತೀರಿ?"

"ನನ್ನ ಬೆಡ್‌ರೂಮಿಗೆ ಯಾರೂ ಬರೋದಿಲ್ಲ. ಅದನ್ನು ನಾನೇ ಸ್ವಚ್ಛಗೊಳಿಸುವುದು. ಮೊದಲಿನಿಂದಲೂ ನಡೆದು ಕೊಂಡು ಬಂದ ಕ್ರಮ. ಯಾರಿಗೂ ಅದೇನು ಹೊಸದೆನಿಸುವುದಿಲ್ಲ. ಅನುಮಾನ ಮೂಡುವುದೂ ಇಲ್ಲ. ಬೇರೆ ಯಾರೂ ಕೋಣೆಯೊಳಗೆ ಬರುವುದು ಅಪರೂಪ. ಒಂದೊಮ್ಮೆ ಬಂದರೂ, ಆ ಪೆಟ್ಟಿಗೆಯಡಿ ಒಂದು ತಿಜೋರಿ ಇರುವುದು ಕಲ್ಪನೆ ಮಾಡಲೂ ಸಾಧ್ಯವಿಲ್ಲ."

"ನೀವು ಆ ತಿಜೋರಿಯನ್ನು ತೆರೆಯುವುದಿಲ್ಲವೇ? ಆವಾಗ ಬೇರೆ ಯಾರಾದರೂ ನೋಡಿರಬಹುದಲ್ವೇ?"

"ನಾನು ತಿಜೋರಿ ತೆಗೆದು ಕೆಲವೊಮ್ಮೆ ನೋಡುವುದಿದೆ. ವಜ್ರಗಳು ಭದ್ರವಾಗಿವೆಯಲ್ಲ ಅಂತ. ಆದರೆ, ನಾನು ನೋಡುವುದು ರಾತ್ರಿ ಹನ್ನೊಂದು–ಹನ್ನೆರಡು ಗಂಟೆಯ ಮೇಲೆ. ಎಲ್ಲರೂ ಮಲಗಿದ್ದಾಗ. ನಾನಾಗ ಕೋಣೆಯ ದೀಪ ಕೂಡ ಹಾಕುವುದಿಲ್ಲ. ಬರೀ ಟಾರ್ಚ್ ಬೆಳಕಲ್ಲಿ ಆ ಪೆಟ್ಟಿಗೆ ಸರಿಸಿ, ತಿಜೋರಿ ತೆಗೆದು ನೋಡ್ತೀನಿ. ಅದು ಯಾರ ಗಮನಕ್ಕೂ ಬರುವ ಸಾಧ್ಯತೆಯಿಲ್ಲ."

"ನೀವು ಬಹಳ ಜಾಗ್ರತೆ ವಹಿಸ್ತೀರಿ."

"ಇಷ್ಟೆಲ್ಲಾ ಜಾಗ್ರತೆ ಮಾಡಿಯೂ, ಆ ಕೀಲಿ ಕೈ ಹೇಗೆ ನಾಪತ್ತೆಯಾಯಿತೆಂದೇ ಅರ್ಥವಾಗ್ತಿಲ್ಲ!"

"ಏನಂದ್ರೀ?"

"ಇವತ್ತು ಬೆಳಗ್ಗೆ ನಾನು ಸ್ನಾನಕ್ಕೆ ಹೋಗಿ, ಬರುವಾಗ ಯಾರೋ ನನ್ನ ಬೆಡ್‌ರೂಮಿನಿಂದ ಅವಸರವಸರವಾಗಿ ಹೊರ ಹೋದಂತೆ ಆಯಿತು. ನನ್ಗೆ ಅನುಮಾನವಾಯಿತು. ಒಳಗೆ ಬಂದು ನೋಡಿದಾಗ, ಆ ಅಲಮಾರಿನಲ್ಲಿದ್ದ ಪುಸ್ತಕಗಳು ಅಸ್ತವ್ಯಸ್ತವಾಗಿದ್ದಂತೆ ಅನಿಸಿತು. ಸಂದೇಹದಿಂದ ಪರಿಶೀಲಿಸಿದಾಗ, ಆ ರಹಸ್ಯ ಪಾಕೆಟ್ಟಿನಲ್ಲಿದ್ದ ಕೀಲಿ ಕೈ ನಾಪತ್ತೆಯಾಗಿತ್ತು!"

ಬೋಪಯ್ಯ ಕ್ಷಣ ಕಾಲ ಮಾತು ನಿಲ್ಲಿಸಿದ. ಕರಮಚಂದ ನಿರ್ಲಿಪ್ತನಾಗಿ ಆತನ ಮುಂದಿನ ಮಾತುಗಳಿಗೆ ಕಾಯುತ್ತಿದ್ದ.

"ನನ್ಗೆ ಒಂದು ಕ್ಷಣ ಏನು ಮಾಡುವುದೆಂದೇ ತೋಚಲಿಲ್ಲ. ತಿಜೋರಿ ವಿಷ್ಯ ರಹಸ್ಯವಾಗಿದೆ ಅಂತ ಭಾವಿಸಿದ್ದೆ. ಅದು ಈಗ ಯಾರಿಗೋ ತಿಳಿದಿದೆ ಅನ್ನೋದು ದಿಟವಾಯಿತು. ಸ್ನಾನ ಮಾಡಿ, ಬರಲು ನಾನು ಸುಮಾರು ಹದಿನೈದು ನಿಮಿಷ ತೆಗೆದುಕೊಂಡಿದ್ದೇನೆ. ಅಷ್ಟರೊಳಗೆ, ಪೆಟ್ಟಿಗೆ ಸರಿಸಿ,